ಹರಿಕಥಾಮೃಥಸಾರ

ಅಣುತಾರತಮ್ಯ ಸಂಧಿ

ಹರಿಕಥಾಮೃಥಸಾರ ಗುರುಗಳ ಕರುಣಧಿಮ್ದಾಪನಿಥು ಪೇಳುವೆ
ಪರಮ ಭಗವಧ್ಭಕ್ಥರಿಧನಾಧರಧಿ ಕೇಳುವುಧು

ವಿಷ್ಣುಸರ್ವೋತ್ತಮನು ಪ್ರಕೃತಿ ಕ
ನಿಷ್ಟಳೆನಿಪಳಾನಂತ ಗುಣ ಪರ
ಮೇಷ್ಟಿ ಪವನರು ಕಡಿಮೆ ವಾಣೀ ಭಾರತಿಗಳಧಮ
ವಿಷ್ಣುವಾಹ ಫಣೀಂದ್ರ ಮೃಡರಿಗೆ
ಕೃಷ್ಣಮಹಿಷಿಯರಧ ಮರಿವರೊಳು
ಶ್ರೇಷ್ಟಳೆನಿಪಳು ಜಾಂಬವತಿಯಾವೇಷಬಲದಿಂದ ೨೯-೦೧

ಪ್ಲವಗ ಪನ್ನಗಪಾಹಿಭೂಷಣ
ಯುವತಿಯರು ಸಮ ತಮ್ಮೊಳಗೆ ಜಾಂ
ಬವತಿಗಿಂತಲಿ ಕಡಿಮೆ ಇವರಿಂದಿಂದ್ರಕಾಮರಿಗೆ
ಅವರ ಪ್ರಾಣನು ಕಡಿಮೆ ಕಾಮನ
ಕುವರ ಶಚಿ ರತಿ ದಅ ಗುರು ಮನು
ಪ್ರವಹಮಾರುತ ಕೊರತೆಯೆನಿಸುವನಾರು ಜನರಿಂದ ೨೯-೦೨

ಯಮ ದಿವಾಕರ ಚಂದ್ರ ಮಾನವಿ
ಸಮರು ಕೋಣಪ ಪ್ರವಹಗಧಮರು
ದ್ಯುಮಣಿಗಿಂತಲಿ ವರುಣ ನೀಚನುನಾರದಾಧಮನು

ಸುಮನಸಾಸ್ಯ ಪ್ರಸೂತಿ ಭೃಗುಮುನಿ
ಸಮರು ನಾರದಗಧಮರತ್ರಿ
ಪ್ರಮುಖ ವಿಶ್ವಾಮಿತ್ರ ವೈವಸ್ವತರನಲಗಧಮ ೨೯-೦೩

ಮಿತ್ರ ತಾರ ನಿರಋತಿ ಪ್ರವಹ
ಪತ್ನಿ ಪ್ರಾವಹಿ ಸಮರು ವಿಶ್ವಾ
ಮಿತ್ರಗಿಂತಲಿ ಕೊರತೆ ವಿಶ್ವಕ್ಸೇನ ಗಣನಾಥಾ
ವಿತ್ತಪತಿ ಅಶ್ವಿನಿಗಳಧಮರು
ಮಿತ್ರ ಮೊದಲಾದವರಿಗಿಂತಲಿ
ಬಿತ್ತರಿಪೆನು ಶತಸ್ಥ ದಿವಿಜರ ವ್ಯೂಹನಾಮಗಳ ೨೯-೦೪

ಮರುತರೊಂಭತ್ತಧಿಕ ನಾಲ್ವ
ತ್ತೆರಡು ಅಶ್ವಿನಿ ವಿಶ್ವೇದೇವರು
ಎರಡೈದು ಹನ್ನೊಂದು ಋದ್ರರು ದ್ವಾದಶಾದಿತ್ಯ
ಗುರು ಪಿತೃಉತ್ರಯವಷ್ಟವಸುಗಳು
ಭರತ ಭಾರತಿ ಪೃಥ್ವಿ ಋಭುವೆಂ
ದರಿವುದಿವರನು ಸೋಮರಸಪಾನಾಹರಹುದೆಂದು ೨೯-೦೫

ಈ ದಿವೌಕಸರೊಳಗೆ ಉಕ್ತರು
ಐದಧಿಕದಶ ಉಳಿದ ಎಂಭ
ತ್ತೈದು ಶೇಷರಿಗೆಣೆಯೆನಿಸುವರು ಧನಪ ವಿನಾಯಕರು
ಸಾಧು ವೈವಸ್ವತ ಸ್ವಾಯಂಭುವ
ಶ್ರೀದ ತಾಪಸರುಳಿದು ಮನು ಏ

www.yousigma.com

ಕಾದಶರು ವಿಘ್ನೇಶಗಿಂತಲಿ ನೀಚರೆನಿಸುವರು ೨೯-೦೬

ಚ್ಯವನನಂದನ ಕವಿ ಬೃಹಸ್ಪತಿ
ಅವರ ಜನು ಚಥ್ಯಮುನಿ ಪಾವಕ
ಧ್ರುವ ನಹುಷ ಶಶಿಬಿಂದು ಪ್ರಿಯವ್ರತನು ಪ್ರಹ್ಲಾದ
ಕುವಲಯಪರುಕ್ತೇತರಿಂದಲಿ
ಅವರ ರೋಹಿಣಿ ಶಾಮಲಾ ಜಾ
ನ್ಹವಿ ವಿರಾಟ್ಪಜನ್ಯ ಸಂಜ್ಞಾಖ್ಯದೇವಿಯರು ಅಧಮ ೨೯-೦೭

ದ್ಯುನದಿಗಿಂತಲಿ ನೀಚರೆನಿಪರು
ಅನಭಿಮಾನಿ ದಿವೌಕಸರು ಕೇ
ಚನಮುನಿಗಳಿಗೆ ಕಡಿಮೆ ಸ್ವಾಹಾದೇವಿಗಧಮ ಬುಧ
ಎನಿಸುವಳುಷಾದೇವಿ ನೀಚಳು
ಶನಿ ಕಡಿಮೆ ಕಮಾಧಿಪತಿ ಸ
ದ್ವಿನುತ ಪುಷ್ಕರ ನೀಚನೆನಿಸುವ ಸೂಯನಂದನಗೆ ೨೯-೦೮

ಕೊರತೆಯನಿಪರಶೀತಿ ಋಷಿ ಪು
ಷ್ಕರಗೆ ಊವಶಿ ಮುಖ್ಯ ಶತ ಅ
ಪ್ಸರರು ತುಂಬುರಮುಖರು ಅಜಾನಜರೆನಿಸುತಿಹರು
ಕರೆಸುವದು ಅನಲಗಣ ನಾಲ್ವ
ತ್ತರೆ ಚತುದಶ ದ್ವ್ಯಷ್ಟ ಸಾವಿರ
ಹರಿಮಡದಿಯರು ಸಮರೆನಿಸುವರು ಪಿಂತೆ ಪೇಳ್ದಿರಿಗೆ ೨೯-೦೯

ತದವರರ ನಾಕ್ಯಾತ ಅಪ್ಸರ
ಸುರತಿಯರು ಕೃಷ್ಣಾಂಗಸಂಗಿಗ
ಗಳದರ ತರುವಾಯದಲಿ ಚಿರಪಿತರುಗಳು ಇವರಿಂದ
ತ್ರಿದಶ ಗಂಧವಗಣ ಇವರಿಂ
ದಧಮ ನರಗಂಧವರಿವರಿಂ
ದುದಧಿಮೇ ಖಳಪತಿಗಳಧಮರು ನೂರು ಗುಣದಿಂದ ೨೯-೧೦

ಪೃಥ್ವಿಪತಿಗಳಿಗಿಂತ ಶತ ಮನು
ಜೋತ್ತಮರು ಕಡಿಮೆನಿಪರಿವರಿಂ
ದುತ್ತರೋತ್ತರ ನೂರು ಗುಣದಿಂದಧಿಕರಾದವರ
ನಿತ್ಯದಲಿ ಚಿಂತಿಸುತ ನಮಿಸುತ
ಭೃತ್ಯ ನಾನಹುದೆಂಬ ಭಕ್ತರ
ಚಿತ್ತದಲಿ ನೆಲೆಗೊಂಡು ಕರುಣಿಪರಖಿಳಸೌಖ್ಯಗಳ ೨೯-೧೧

ದ್ರುಮ ಲತಾ ತೃಣ ಗುಲ್ಮ ಜೀವರು
ಕ್ರಮದಿ ನೀಚರು ಇವರಿಗಿಂತಾ
ಧಮರೆನಿಸುವರು ನಿತ್ಯಬದ್ಧರಿಗಿಂತಲಜ್ಞ್ಯಾನಿ
ತಮಸಿಗ್ಯೋಗ್ಯರ ಭೃತ್ಯರಧಮರು
ಅಮರುಷಾದ್ಯಭಿಮಾನಿ ದೈತ್ಯರು
ನಮುಚಿ ಮೊದಲಾದವರಿಗಿಂತಲಿ ವಿಪ್ರಚಿತಿತಿ ನೀಚ ೨೯-೧೨

ಅಲಕುಮಿಯು ತಾ ನೀಚಳೆನಿಪಳು
ಕಲಿ ಪರಮನೀಚತಮನವನಿಂ

ದುಳಿದ ಪಾಪಿಗಳಿಲ್ಲ ನೋಡಲು ಈಜಗತ್ತ್ರಯದಿ
ಮಲವಿಸಜನಕಾಲದಲಿ ಕ
ತ್ತಲೆಯೊಳಗೆ ಕಶ್ಮಲ ಕುಮಾಗ
ಸ್ಥಳಗಳಲಿ ಚಿಂತನೆಯ ಮಾಳ್ಪುದು ಬಲ್ಲವರು ನಿತ್ಯ ೨೯-೧೩

ಸತ್ವಜೀವರ ಮಾನಿ ಬ್ರಹ್ಮನು
ನಿತ್ಯಬದ್ಧರೊಳಗೆ ಪುರಂಜನ
ದೈತ್ಯ ಸಮುದಾಯಾಧಿಪತಿ ಕಲಿಯೆನಿಪ ಪವಮಾನ
ನಿತ್ಯದಲಿ ಅವರೊಳಗೆ ಕಮಪ್ರ
ವತಕನು ತಾನಾಗಿ ಶ್ರೀಪುರು
ಷೋತ್ತಮನ ಸಂಪ್ರೀತಿ ಗೋಸುಗ ಮಾಡಿ ಮಾಡಿಸುವ ೨೯-೧೪

ಪ್ರಾಣದೇವನು ತ್ರಿವಿಧರೊಳಗೆ ಪ್ರ
ವೀಣ ತಾನೆಂದೆನಿಸಿ ಅಧಿಕಾ
ರಾನುಸಾರದಿ ಕಮಗಳ ತಾ ಮಾಡಿ ಮಾಡಿಸುವ
ಜ್ಞಾನ-ಭಕ್ತಿ ಸುರಗೆ ಮಿಶ್ರ
ಜ್ಞಾನ ಮಧ್ಯಮ ಜೀವರಿಗೆ ಅ
ಜ್ಞಾನ ಮೋಹ ದ್ವೇಷಗಳ ದೈತ್ಯರಿಗೆ ಕೊಡುತಿಪ್ಪ ೨೯-೧೫

ದೇವದೈತ್ಯರ ತಾರತಮ್ಯವ
ನೀ ವಿಧದಿ ತಿಳಿದೆಲ್ಲರೊಳು ಲ
ಮೀವರನೆ ಸವೋತ್ತಮನು ಎಂದರಿದು ನಿತ್ಯದಲಿ
ಸೇವಿಸುವ ಭಕ್ತರಿಗೊಲಿದು ಸುಖ

www.yousigma.com

ವೀವ ಸವತ್ರದಲಿ ಸುಖಮಯ
ಶ್ರೀ ವಿರಿಂಚಾದ್ಯಮರನುತ ಜಗನ್ನಾಥ ವಿಟ್ಠಲನು ೨೯-೧೬

www.yousigma.com